## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಅಧಿಕಾರಿಗಳಿಗೆ ವಿದೇಶ ಪ್ರಯಾಣದ ಸಲುವಾಗಿ ರಹದಾರಿ ಪತ್ರ ಪಡೆಯಲು ಅನಪೇಕ್ಷಣಾ ಪತ್ರವನ್ನು ಹೊರಡಿಸುವ ಅಧಿಕಾರವನ್ನು ಪ್ರತ್ಯಾಯೋಜಿಸುವ ಬಗ್ಗೆ.

ಓದಲಾಗಿದೆ: 1)ಅಧಿಕೃತ ಜ್ಞಾಪನ ಸಂಖ್ಯೆ:ಡಿಪಿಎಆರ್ 108 ಕೆ.ಎಂ.ಎಂ. 83 ದಿನಾಂಕ 08-07-1983.

----

JD[A] DPE(PE) DPE(SE)

**ಪ್ರಸ್ತಾವನೆ:**

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯ ಆಡಳಿತ ನಿಯಂತ್ರಣದಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆಗೆ ಸೇರಿದ 675 ಪ್ರಾಂಶುಪಾಲರು, 6037 ಉಪನ್ಯಾಸಕರು, ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆಗೆ ಸೇರಿದ 2,000 ಕ್ಕೂ ಹೆಚ್ಚು ಮಂದಿ ಸಮೂಹ-ಎ ವೃಂದದ ಅಧಿಕಾರಿಗಳು, 4219 ಪ್ರೌಢ ಶಾಲಾ ಮುಖ್ಯೋಪಾಧ್ಯಾಯರು, 27,832 ಸರ್ಕಾರಿ ಪ್ರೌಢ ಶಾಲಾ ಶಿಕ್ಷಕರು, 22,274 ಅನುದಾನಿತ ಪ್ರೌಢ ಶಾಲಾ ಶಿಕ್ಷಕರು, 1,71,473 ಸರ್ಕಾರಿ ಪ್ರಥಮಿಕ ಶಾಲಾ ಶಿಕ್ಷಕರು, 16,031 ಅನುದಾನಿತ ಪ್ರಾಥಮಿಕ ಶಾಲಾ ಶಿಕ್ಷಕರು ಕೆಲಸ ಮಾಡುತ್ತಿದ್ದಾರೆ. ಈ ಅಧಿಕಾರಿಗಳು ಹಾಗೂ ಶಿಕ್ಷಕರುಗಳಲ್ಲಿ ವಿದೇಶ ಪ್ರಯಾಣ ಕೈಗೊಳ್ಳಲು ಇಚ್ಚೆಪಡುವವರು ರಹದಾರಿ ಪತ್ರವನ್ನು ಪಡೆಯಲು, ಅನಪೇಕ್ಷಣಾ ಪತ್ರಕ್ಕಾಗಿ ಮನವಿಗಳನ್ನು ಸಲ್ಲಿಸುತ್ತಿರುತ್ತಾರೆ. ಓದಲಾದ ದಿನಾಂಕ 08-07-1983 ರ ಅಧಿಕೃತ ಜ್ಞಾಪನದಲ್ಲಿ ಹೊರಡಿಸಿರುವ ಸೂಚನೆಗಳನ್ವಯ ಪತ್ರಾಂಕಿತ ಅಧಿಕಾರಿಗಳ ಸಂಬಂಧ, ಸರ್ಕಾರ ಹಾಗು ಪತ್ರಾಂಕಿತರಲ್ಲದ ನೌಕರರ ಸಂಬಂಧ ಆಯಾ ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರು ಅನಪೇಕ್ಷಣಾ ಪತ್ರವನ್ನು ನೀಡುತ್ತಿದ್ದಾರೆ. ಇದರಿಂದ ಅನಪೇಕ್ಷಣಾ ಪತ್ರ ಪಡೆಯಲು ಸಾಕಷ್ಟು ವಿಳಂಬವಾಗುತ್ತಿರುವುದನ್ನು ಸರ್ಕಾರ ಗಮನಿಸಿದೆ. ಆದ್ದರಿಂದ ಇಂತಹ ಕೋರಿಕೆಗಳನ್ನು ಶೀಘ್ರವಾಗಿ ವಿಲೇವಾರಿ ಮಾಡುವ ಸಲುವಾಗಿ, ಈ ವಿಷಯವನ್ನು ಪರಿಶೀಲಿಸಿ ಆಯಾಯಾ ಇಲಾಖಾ ಹಂತದಲ್ಲಿಯೇ ಅನಪೇಕ್ಷಣಾ ಪತ್ರವನ್ನು ನೀಡಲು ಅಧಿಕಾರ ಪ್ರತ್ಯಾಯೋಜಿಸುವುದು ಸೂಕ್ತವೆಂದು ಭಾವಿಸಿ, ಈ ಕೆಳಗಿನಂತೆ ಆದೇಶಿಸಿದೆ:

**ಸರ್ಕಾರದ ಆದೇಶ ಸಂಖ್ಯೆ: ಇಡಿ 133 ಇಎಸ್‌ಡಬ್ಲ್ಯೂ 2008, ಬೆಂಗಳೂರು**
**ದಿನಾಂಕ :19-04-2008**

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಈ ತಕ್ಷಣದಿಂದ ಜಾರಿಗೆ ಬರುವಂತೆ ಹಾಗು ಮುಂದಿನ ಆದೇಶದ ವರೆಗೆ ಅಧಿಕೃತ ಜ್ಞಾಪನ ಸಂಖ್ಯೆ: ಡಿಪಿಎಆರ್ 108 ಕೆ. ಎಂ. ಎಂ.

ds_services_ep

83 ದಿನಾಂಕ 08-07-1983ರಲ್ಲಿ ಹೊರಡಿಸಿರುವ ಸೂಚನೆಗಳನ್ನು ಮುಂದುವರೆಸುತ್ತಾ, ಪ್ರಾಥಮಿಕ ಹಾಗು ಪ್ರೌಢ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಇಲಾಖಾ ಮುಖ್ಯಸ್ಥರುಗಳಿಗೆ ಈ ಕೆಳಗಿನಂತೆ ಇಲಾಖೆಯ ಅಧಿಕಾರ ವ್ಯಾಪ್ತಿಯಲ್ಲಿ ಬರುವ ಅಧಿಕಾರಿಗಳಿಗೆ/ನೌಕರರಿಗೆ/ಶಿಕ್ಷಕರುಗಳಿಗೆ (1)ವಿದೇಶ ಪ್ರಯಾಣ ಕೈಗೊಳ್ಳಲು ಇಚ್ಛಿಸುವವರಿಗೆ ರಹದಾರಿ ಪತ್ರ(ಪಾಸ್‌ಪೋರ್ಟ್) ಪಡೆಯಲು ಅನಪೇಕ್ಷಣಾ ಪತ್ರವನ್ನು ಕೋರಿದಲ್ಲಿ, ದಿನಾಂಕ 08-07-1983 ರ ಅಧಿಕೃತ ಜ್ಞಾಪನದಲ್ಲಿ ನಿಗದಿ ಪಡಿಸಿರುವ ಷರತ್ತುಗಳ ಪ್ರಕಾರ ಪರಿಶೀಲಿಸಿ, ಅನಪೇಕ್ಷಣಾ ಪತ್ರವನ್ನು ನೀಡಲು ಹಾಗೂ (2) ಸ್ವಂತ ವೆಚ್ಚದಲ್ಲಿ ವಿದೇಶಿ ಪ್ರಯಾಣ ಮಾಡಲು ಅನುಮತಿ ನೀಡುವ ವಿಷಯದಲ್ಲಿ ನಿರ್ಣಯ ಕೈಗೊಳ್ಳಲು ಕೆಳಕಂಡಂತೆ ಅಧಿಕಾರ ಪ್ರತ್ಯಾಯೋಜಿಸಲಾಗಿದೆ:

| ಅಧಿಕಾರಿಗಳ ದರ್ಜೆ ಹಾಗು ಇಲಾಖೆ | ಹಾಲಿ ಅನಪೇಕ್ಷಣಾ ಪತ್ರ/ಅನುಮತಿ ನೀಡುತ್ತಿರುವ ಪ್ರಾಧಿಕಾರ/ಅಧಿಕಾರಿ | ಈಗ ಅನಪೇಕ್ಷಣಾ ಪತ್ರ/ಅನುಮತಿ ನೀಡಲು ಅಧಿಕಾರ ಪ್ರತ್ಯಾಯೋಜಿಸಿರುವ ಪ್ರಾಧಿಕಾರ/ಅಧಿಕಾರಿ |
|---|---|---|
| 1) ಪ್ರೌಢ ಶಾಲಾ ಮುಖ್ಯೋಪಾಧ್ಯಾಯರು ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗು ಇತರೆ ಸಮಾನಾಂತರ ವೃಂದದ ಅಧಿಕಾರಿಗಳು ಹಾಗೂ ಇತರೆ ಸಮೂಹ 'ಬಿ' ಪತ್ರಾಂಕಿತ ಅಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ | ಸರ್ಕಾರ | ಸಂಬಂಧಪಟ್ಟ ವಿಭಾಗಗಳ ಆಯುಕ್ತರು/ ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ |
| 2)ಪ್ರಾಂಶುಪಾಲರು, ಉಪನ್ಯಾಸಕರು ಹಾಗು ಇತರೆ ಸಮಾನಾಂತರ ವೃಂದದ ಅಧಿಕಾರಿಗಳು, ಪದವಿ ಪೂರ್ವ ಶಿಕ್ಷಣ ಇಲಾಖೆ | ಸರ್ಕಾರ | ಆಯುಕ್ತರು/ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ |
| 3)ಪ್ರೌಢ ಶಾಲಾ ಶಿಕ್ಷಕರು | ನಿರ್ದೇಶಕರು(ಪ್ರೌಢ) | ಸಂಬಂಧಪಟ್ಟ ಜಿಲ್ಲಾ ಉಪ ನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ |

| | | |
|---|---|---|
| 4)ಪ್ರಾಥಮಿಕ ಶಾಲಾ ಶಿಕ್ಷಕರು | ನಿರ್ದೇಶಕರು(ಪ್ರಾಥಮಿಕ) | ಸಂಬಂಧಪಟ್ಟ ಜಿಲ್ಲಾ ಉಪ ನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ |

**ಭಾರತದ ರಾಷ್ಟ್ರಪತಿಗಳ ಆದೇಶಾನುಸಾರ**
**ಮತ್ತು ಅವರ ಹೆಸರಿನಲ್ಲಿ**

**(ಎಂ.ಎಂ.ಹಿರೇಮಠ)**
**ಸರ್ಕಾರದ ಅಧೀನ ಕಾರ್ಯದರ್ಶಿ**
**ಶಿಕ್ಷಣ ಇಲಾಖೆ(ಸೇವೆಗಳು-1 &2)**

ಇವರಿಗೆ:
ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು-ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು

ಪ್ರತಿಯನ್ನು:-
1)ಮಹಾಲೇಖಪಾಲರು, ಕರ್ನಾಟಕ , ಬೆಂಗಳೂರು
2)ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು
3)ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ/ಗುಲಬರ್ಗಾ
4)ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ, ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಚೇರಿ ಆವರಣ, ಬೆಂಗಳೂರು
5)ನಿರ್ದೇಶಕರು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು
6)ನಿರ್ದೇಶಕರು, ಡಿ.ಎಸ್.ಇ.ಆರ್.ಟಿ., ಬನಶಂಕರಿ 3ನೇ ಹಂತ, ಬೆಂಗಳೂರು
7)ಜಂಟಿ ನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು/ಧಾರವಾಡ/ಗುಲಬರ್ಗಾ
8)ಎಲ್ಲಾ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ(ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಮುಖಾಂತರ)
9)ಎಲ್ಲಾ ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ(ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಮುಖಾಂತರ)
10)ಸರ್ಕಾರದ ಕಾರ್ಯದರ್ಶಿ/ಉಪ ಕಾರ್ಯದರ್ಶಿ, ಪ್ರಾಥಮಿಕ ಹಾಗು ಪ್ರೌಢ ಶಿಕ್ಷಣ ಇಲಾಖೆ ಇವರ ಆಪ್ತ ಶಾಖೆ
11)ಮಾಹಿತ ಕೇಂದ್ರ, ಶಿಕ್ಷಣ ಇಲಾಖೆ
12)ಶಾಖಾ ರಕ್ಷಣ ಕಡತ/ಬಿಡಿ ಪ್ರತಿಗಳು

ds_services_ep